ವರ್ಷದ ಸರಾಸರಿ ಇಳುವರಿಯ ಬದಲು 3 ವರ್ಷದ ಸರಾಸರಿ ಇಳುವರಿಯನ್ನು ತೆಗೆದುಕೊಳ್ಳುವ ಸಲುವಾಗಿ ಮನವಿಗಳು ಬರುತ್ತಿವೆ.

ಈ) ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಆಯಾ ವರ್ಷದ ಉತ್ಪಾದನಾ ವೆಚ್ಚದ ಆಧಾರದ ಮೇಲೆಯೇ ನಿಗದಿಪಡಿಸಲಾಗುತ್ತಿದೆಯೇ ವಿನಃ 5 ವರ್ಷ ಅಥವಾ 10 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸಲಾಗುತ್ತಿಲ್ಲ.

ಉ) ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕಾಲಕಾಲಕ್ಕೆ ಅನೇಕ ಯೋಜನೆಗಳನ್ನು ಸರ್ಕಾರವು ರೂಪಿಸುತ್ತಿದೆ.

ಊ) ಈ ದಿಶೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.

1) ರಿಯಾಯಿತಿ ದರದಲ್ಲಿ ಕೃಷಿ ಸಾಮಗ್ರಿಗಳ ವಿತರಣೆ.
2) ಅಲ್ಪಾವಧಿ ಸಾಲವನ್ನು ಧೀರ್ಘಾವಧಿ ಸಾಲವಾಗಿ ಪರಿವರ್ತಿಸುವುದು (ಅಗತ್ಯವಿದ್ದಾಗ)
3) ಕಿರುಬುತ್ತಿ ಚೀಲಗಳ ವಿತರಣೆ
4) ನೈಸರ್ಗಿಕ ವಿಕೋಪಗಳಿಂದ ಉಂಟಾದ ತೊಂದರೆಗಳಿಗೆ ಪರಿಹಾರ ಕಾರ್ಯಕ್ರಮಗಳು
5) ಮಾರುಕಟ್ಟೆ ಬೆಲೆ ಕುಸಿದಾಗ, ಬೆಂಬಲ ಬೆಲೆಯಲ್ಲಿ ಸರ್ಕಾರವು ಆಹಾರಧಾನ್ಯಗಳನ್ನು ಕೊಳ್ಳುವುದು.
6) ಬೆಳೆ ವಿಮಾ ಯೋಜನೆ
7) ನೀರಾವರಿ ಸೌಲಭ್ಯ ಕಲ್ಪಿಸುವುದು
8) ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳು
9) ಅಧಿಕ ಇಳುವರಿಗಾಗಿ ಸುಧಾರಿತ ತಳಿಗಳ ಅಭಿವೃದ್ಧಿ ಕಾರ್ಯಕ್ರಮ
10) ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು.
11) ಕೃಷಿ ವಿಸ್ತರಣಾ ಯೋಜನೆ ಇತ್ಯಾದಿ

ರಸಗೊಬ್ಬರದ ಅಭಾವ

3689 - ಶ್ರೀ [illegible]ಪಂತರಡ್ಡಿ ಮೋತಕಪಲ್ಲಿ (ಸೇಡಂ) ; ಮಾನ್ಯ ಕೃಷಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗೊಬ್ಬರದ ಬೆಲೆ ಏರಿಕೆಯ ದ್ವಿಮುಖ ಬೆಲೆ ನೀತಿಯಿಂದ ಹೆಚ್ಚಿನ ಹೆಚ್ಚು ಗೊಬ್ಬರ ಸಣ್ಣ ಅತಿ ಸಣ್ಣ ರೈತರ ಹೆಸರಿನಲ್ಲಿ ಖರೀದಿಯಾಗಿ ದಾಸ್ತಾನುದಾರರ ಹತ್ತಿರ ದೈಥೀಕರಣವಾಗಿ ಇದರಿಂದ ಗೊಬ್ಬರದ ಅಭಾವವಾಗಿ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗುವ ಸಾಧ್ಯತೆಗಳಿಲ್ಲವೆ?*

ಆ) *ಇದರಿಂದ ರೈತರಿಗೆ ಗೊಬ್ಬರದ ಖರೀದಿ ಮಾಡಲು ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೇ?*

ಇ) *ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತ ಪ್ರತಿವರ್ಷ ನಷ್ಟದಲ್ಲಿದ್ದು ಸಾಲದಲ್ಲಿ ಮುಳುಗಿರುವುದು ನಿಜವಲ್ಲವೇ?*

ಈ) *ರೈತರ ಬೆಳೆಗೆ ತಕ್ಕ ಬೆಲೆ ಇಲ್ಲದೆ ನಷ್ಟವಾಗುವಾಗ, ಇನ್ನೂ ಹೆಚ್ಚಿನ ಬೆಲೆಯಲ್ಲಿ ಗೊಬ್ಬರವನ್ನು ಖರೀದಿ ಮಾಡಲು ಅಸಮರ್ಥವಾಗಿ ಬೆಳೆಯದಿದ್ದರೆ ರಾಜ್ಯ, ರಾಷ್ಟ್ರಕ್ಕೆ ನಷ್ಟವಾಗುವುದಿಲ್ಲವೇ?*

ಉ) *ರೈತರ ಬೆಳೆಗಳಿಗೆ ಅತ್ಯಾವಶ್ಯಕವಾದ ರಸಗೊಬ್ಬರದ ಬೆಲೆ ಏರಿದ್ದಕ್ಕಾಗಿ ಸರ್ಕಾರ ರಿಯಾಯಿತಿ ಹಣವನ್ನು ನೀಡಿ ವ್ಯತ್ಯಾಸವನ್ನು ಸರಿಪಡಿಸಿ ಮೊದಲಿನಂತೆಯೇ*

ಬೆಲೆ ನಿಗದಿಪಡಿಸಲು ಸಾಧ್ಯವಿಲ್ಲವೇ?

ಊ)ಸಣ್ಣ ದೊಡ್ಡ ರೈತರೆಂಬ ಭಾವನೆ ಇಲ್ಲದೆ ಗೊಬ್ಬರಕ್ಕೆ ರಿಯಾಯಿತಿ ಹಣವನ್ನು ನೀಡಿ ರೈತರಿಗೆ ಬೆಳೆ ಬೆಳೆಯಲು ಅನುಕೂಲ ಮಾಡಬಾರದೇಕೆ?

ಶ್ರೀ ಎಸ್. ಚಿಕ್ಕೌಡ (ಕೃಷಿ ಸಚಿವರು):

ಅ) ರಸಗೊಬ್ಬರದ ದ್ವಿಮುಖ ಬೆಲೆನೀಡಿಕೆಯನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಅಡಚಣೆ ಇರುವುದು ಸರ್ಕಾರದ ಮನಗಂಡಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈ ಯೋಜನೆ ಅಡಿಯಲ್ಲಿ ಒದಗಿಸಿರುವ ಸೌಲಭ್ಯದ ದುರುಪಯೋಗ ಆಗಬಹುದಾದ ಸಾಧ್ಯತೆಗಳಿರುವುದೂ ಸಹ ಸರ್ಕಾರ ಗಮನಿಸಿದೆ ಆದ್ದರಿಂದ ಈ ಸೌಲಭ್ಯದ ದುರುಪಯೋಗವಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸುವ ಸರ್ಕಾರದ ವಿಧಿ ವಿಧಾನಗಳನ್ನು ಎಚ್ಚರಿಕೆಯಿಂದ ರೂಪಿಸುತ್ತಿದೆ.

ಆ) ದ್ವಿಮುಖ ಬೆಲೆ ನೀತಿಯ ಸೌಲಭ್ಯ ದುರುಪಯೋಗವಾಗದಂತೆ, ಯೋಜನೆಯ ಸರಳ ವಿಧಿ ವಿಧಾನಗಳನ್ನು ರೂಪಿಸುವುದರಿಂದ, ರೈತರಿಗೆ ರಸಗೊಬ್ಬರ ಖರೀದಿಮಾಡಲು ತೊಂದರೆಯಾಗುವುದಿಲ್ಲ.

ಇ) ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತನಿಗೆ ನಷ್ಟವಾಗದಂತೆ ಸರ್ಕಾರವು ಬೆಂಬಲ ಬೆಲೆಯನ್ನು ಪ್ರತಿ ವರ್ಷ ನಿಗದಿಪಡಿಸುತ್ತದೆ. ಮಾರುಕಟ್ಟೆ ಬೆಲೆಯು ಬೆಂಬಲ ಬೆಲೆಗಿಂತ ಕಡಿಮೆಯಾದಲ್ಲಿ ಸರ್ಕಾರವೇ ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಈ) ಕೇಂದ್ರ ಸರ್ಕಾರದ ರಸಗೊಬ್ಬರಗಳ ಬೆಲೆ ಏರಿಕೆಯ ಘೋಷಣೆಯೊಂದಿಗೆ ಬೆಳೆಗಳ ಬೆಂಬಲ ಬೆಲೆಯನ್ನು ಸೂಕ್ತವಾಗಿ ಹೆಚ್ಚಿಸುವುದಾಗಿ ಘೋಷಿಸಿರುವುದರಿಂದ ಈ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಉ) ಸಣ್ಣ ಮತ್ತು ಅತಿ ಸಣ್ಣ ರೈತರು ಕೊಳ್ಳಬಹುದಾದ ರಸಗೊಬ್ಬರಗಳ ಪಳೆ ಬೆಲೆ ಮತ್ತು ಹೊಸ ಬೆಲೆಯ ವ್ಯತ್ಯಾಸವನ್ನು ಕೇಂದ್ರ ಸರ್ಕಾರವು ಸಹಾಯ ಧನ ನೀಡುವ ಮೂಲಕ ಭರಿಸುತ್ತದೆ. ಆದರೆ ಉಳಿದ ರೈತರಿಗೆ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

ಊ) ಸದ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

(ಕೃಷಿ ಇಲಾಖೆಯ ಬೀಜ, ಗೊಬ್ಬರ, ಕ್ರಿಮಿನಾಶಕಗಳ ವಿತರಣೆಯಲ್ಲಿ ಅವ್ಯವಹಾರ

3581 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 87-88, 88-89ನೇ ಸಾಲಿನಲ್ಲಿ ಕೃಷಿ ಇಲಾಖೆಯ ಓಪಿಡಿಪಿ / ಎಸ್‌ಪಿಡಿಪಿ ಇತರೆ ಯೋಜನೆಗಳಲ್ಲಿ ಹಾಗೂ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ರೈತರಿಗೆ ಉಚಿತವಾಗಿ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧಿಗಳನ್ನು ಒದಗಿಸುವಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಅವರು ಸಲ್ಲಿಸಿರುವ ವರದಿ ಅಪೂರ್ಣವಾಗಿರುವುದರಿಂದ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರು ಅಂತಿಮ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಇದರ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1688 ದಿನಾಂಕ : 21-3-91 ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಕ್ಕೆ ಈಗ ಜಂಟಿ ಕೃಷಿ